گرلز اسلامک آرگنائیزیشن کرناٹکا

ಗರ್ಲ್ಸ್ ಇಸ್ಲಾಮಿಕ್ ಆರ್ಗನೈಝೇಶನ್ ಕರ್ನಾಟಕ

GIRLS ISLAMIC ORGANISATION KARNATAKA

# ‘ಲಜ್ಜೆ – ನನ್ನ ಪ್ರತಿಬಿಂಬ’ ಅಭಿಯಾನದ ಠರಾವುಗಳು

ಗರ್ಲ್ಸ್ ಇಸ್ಲಾಮಿಕ್ ಆರ್ಗನೈಝೇಶನ್ ಕರ್ನಾಟಕವು ವಿದ್ಯಾರ್ಥಿನಿ–ಯುವತಿಯರಲ್ಲಿ ಜಾಗೃತಿ ಮೂಡಿಸಲು ಹಮ್ಮಿಕೊಂಡಿರುವ ‘ಲಜ್ಜೆ–ನನ್ನ ಪ್ರತಿಬಿಂಬ’ ಎಂಬ ಅಭಿಯಾನದ ಪ್ರಯುಕ್ತ ದಿನಾಂಕ ರಂದು ಲ್ಲಿ ನಡೆದ ಸಭೆಯಲ್ಲಿ ಈ ಕೆಳಗಿನ ಠರಾವುಗಳನ್ನು ಅಂಗೀಕರಿಸಲಾಯಿತು.

ವಿದ್ಯಾರ್ಥಿನಿ–ಯುವತಿಯರ ಈ ಪ್ರತಿನಿಧಿ ಸಭೆಯು ಪ್ರತಿಯೊಂದು ಸ್ತರದಲ್ಲಿ ಲಜ್ಜೆಯ ಪಾಲನೆಯನ್ನು ಖಾತರಿಪಡಿಸಲು, ಮಹಿಳೆಯರ ಮಾನ ಮರ್ಯಾದೆಗಳನ್ನು ರಕ್ಷಿಸಲು ಹಾಗೂ ವ್ಯಾಪಕವಾಗಿ ಹಬ್ಬುತ್ತಿರುವ ಅಶ್ಲೀಲತೆಯನ್ನು ತಡೆಗಟ್ಟಲು ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಆಗ್ರಹಿಸುತ್ತದೆ.

1. ಸಂವಿಧಾನದಲ್ಲಿ ತಿದ್ದುಪಡಿಯ ಮೂಲಕ ಮೂಲಭೂತ ಅವಶ್ಯಕತೆಗಳ ಹಕ್ಕನ್ನು (Right to livelyhood) ಮೂಲಭೂತ ಮಾನವ ಹಕ್ಕು ಎಂದು ತೀರ್ಮಾನಿಸಬೇಕು ಹಾಗೂ ಯಾರೂ ಬಡತನದ ಕಾರಣ ಸಮಾಜದಲ್ಲಿ ಅಶ್ಲೀಲತೆ ಕೆಡುಕುಗಳನ್ನು ಹರಡುವ ಕಾರ್ಯಕ್ಕೆ ಬಲಿಯಾಗದಿರಲು ಎಲ್ಲ ಅವಶ್ಯಾರ್ಥಿ ನಾಗರಿಕರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು ಸರಕಾರದ ಕರ್ತವ್ಯವಾಗಿ ಪರಿಗಣಿಸಬೇಕು.
2. ಗ್ರಾಹಕ ವಸ್ತುಗಳ ಜಾಹಿರಾತಿನಲ್ಲಿ ಸತ್ಯಸಂಧತೆ ಪ್ರಾಮಾಣಿಕತೆ ಮತ್ತು ನೈತಿಕ ಮೌಲ್ಯಗಳ ಉನ್ನತ ಮಟ್ಟವನ್ನು ಖಾತರಿಪಡಿಸಲು ಒಂದು ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಬೇಕು. ಇದು ಸರಕುಗಳ ಜಾಹಿರಾತಿಗಾಗಿ ಅನುಸರಿಸುವ ಎಲ್ಲಾ ಪ್ರಚಾರ ವಿಧಾನಗಳ ಬಗ್ಗೆ ನಿಗಾ ವಹಿಸಿ ಜನಸಾಮಾನ್ಯರನ್ನು ಜಾಹಿರಾತಿನ ಮೂಲಕ ಶೋಷಣೆಯಿಂದ ರಕ್ಷಿಸುವಂತಾಗಬೇಕು.
3. ಟಿ.ವಿ. ಚ್ಯಾನೆಲ್, ಚಲನಚಿತ್ರ ಮತ್ತು ಪತ್ರಿಕೆಗಳಲ್ಲಿ ಅಶ್ಲೀಲತೆಯನ್ನು ತಡೆಯುವ ಕಾನೂನನ್ನು ಕಠಿಣವಾಗಿ ಜಾರಿಗೊಳಿಸಬೇಕು. ಸೆನ್ಸಾರ್ ಬೋರ್ಡ್‌ನಲ್ಲಿ ಕಂಡು ಬರುತ್ತಿರುವ ಭ್ರಷ್ಟಾಚಾರವನ್ನು ಅಳಿಸಬೇಕು.
4. ಟಿ.ವಿ. ಮತ್ತು ಮಾಧ್ಯಮಗಳಲ್ಲಿ ಜಾಹಿರಾತು ಹಾವಳಿಯನ್ನು ನಿಯಂತ್ರಿಸುವ ಅಗತ್ಯ ನಿಬಂಧನೆಗಳನ್ನು ರೂಪಿಸಲು ಸೆನ್ಸರ್ ಬೋರ್ಡ್ ಕ್ರಮ ಕೈಗೊಳ್ಳಬೇಕು.
5. ವಾಣಿಜ್ಯ ಜಾಹಿರಾತುಗಳನ್ನು ಪ್ರಸಾರ ಮಾಡುವ ಜಾಹಿರಾತು ಸಂಸ್ಥೆಗಳಿಗೆ ಲೈಸೆನ್ಸ್ ನೀಡಲು ಕಠಿಣ ಮಾನದಂಡಗಳನ್ನು ರೂಪಿಸಬೇಕು. ಉದಾ: ಮಕ್ಕಳ ಕಾರ್ಯಕ್ರಮ ಮತ್ತು ಸುದ್ದಿ ಪ್ರಸಾರಗಳ ಮಧ್ಯೆ ಜಾಹಿರಾತು ಪ್ರಸಾರಕ್ಕೆ ಪೂರ್ಣ ನಿಷೇಧ ಹೇರಬೇಕು ಅಥವಾ ಕಠಿಣ ಮೇರೆಗಳನ್ನು ನಿರ್ಧರಿಸಬೇಕು. ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದಂತಹ ಸಂಸ್ಥೆಗಳು ತಮ್ಮ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಂತಾಗಲು ಅವುಗಳಲ್ಲಿ ವಿವಿಧ ಸಾಮಾಜಿಕ ಸಂಘಟನೆಗಳ ಪ್ರಾತಿನಿಧ್ಯವಿರಬೇಕು.
6. ವಿವಿಧ ಸ್ಥಳಗಳಲ್ಲಿ ಉದ್ಯೋಗ ನಿರ್ವಹಿಸುವ ಮಹಿಳೆಯರ ಸೇವಾವಧಿಯನ್ನು ರಾತ್ರಿ ತಡವಾಗಿ ಮುಂದುವರಿಸದಂತೆ ನಿರ್ಬಂಧಿಸುವ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ವಿಶೇಷತಃ ಕಾಲ್‌ಸೆಂಟರ್ ಮತ್ತು ಇತರ ಕಾರ್ಪೋರೇಟರ್ ಕಛೇರಿಗಳಲ್ಲಿ ಮಹಿಳಾ ಸಿಬಂದಿಗಳ ಸಮಯದಲ್ಲಿ ಅಗತ್ಯ ಬದಲಾವಣೆಯನ್ನು ಮಾಡಬೇಕು.
7. ಕಾರ್ಖಾನೆ, ಫ್ಯಾಕ್ಟರಿ ಮತ್ತು ಇತರ ಸ್ಥಳಗಳಲ್ಲಿ ಉದ್ಯೋಗ ನಿರತ ಮಹಿಳೆಯರ ಆಗಮನ ಮತ್ತು ನಿರ್ಗಮನಕ್ಕೆ ಸೂಕ್ತ ಸಾರಿಗೆ ವ್ಯವಸ್ಥೆ ಮಾಡುವುದರ ಮೂಲಕ ತಮ್ಮ ಕೆಲಸದಿಂದ ಬೇಗನೆ ಬಿಡುವು ಹೊಂದಿ ತಮ್ಮ ಕುಟುಂಬಕ್ಕೆ ಗಮನಹರಿಸುವಂತೆ ಅನುಕೂಲತೆ ಒದಗಿಸಬೇಕು.
8. ಶಾಲಾಕಾಲೇಜುಗಳಲ್ಲಿ ಹುಡುಗ ಹುಡುಗಿಯರ ಸ್ವಚ್ಛಂದ ಮಿಲನದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಹುಡುಗಿಯರಿಗೆ ಕ್ಲಾಸ್ ರೂಮಿಗೆ ಬಂದು ಹೋಗುವ ಮತ್ತು ಕುಳಿತುಕೊಳ್ಳುವ ಸೂಕ್ತ ವ್ಯವಸ್ಥೆಯನ್ನು ಆಡಳಿತ ವರ್ಗವು ಒದಗಿಸಬೇಕು.
9. ಶಿಕ್ಷಣ ಸಂಸ್ಥೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ವಿದ್ಯಾರ್ಥಿನಿ–ಯುವತಿಯರಿಗೆ ಸಭ್ಯ ಉಡುಪನ್ನು ಧರಿಸುವ ಸಾಂವಿಧಾನಿಕ ಹಕ್ಕಿನ ಸ್ವಾತಂತ್ರ್ಯ ನೀಡಬೇಕು.
10. ಹೆತ್ತವರು ಮತ್ತು ಪೋಷಕರು ತಮ್ಮ ಮಕ್ಕಳ ಮೊಬೈಲ್ ಫೋನ್, ಇಂಟರ್‌ನೆಟ್ ಮತ್ತಿತರ ಮಾಧ್ಯಮಗಳ ಉಪಯೋಗದ ಬಗ್ಗೆ ಅರಿವುಳ್ಳವರಾಗಿದ್ದು, ಈ ಸುಲಭ ಮಾಧ್ಯಮಗಳ ಮೂಲಕ ಪಥಭ್ರಷ್ಟಗೊಳ್ಳದಂತೆ ಜಾಗರೂಕರಾಗಿರುವರೆಂದು ನಿರೀಕ್ಷಿಸಲಾಗುತ್ತದೆ.

ಅತಿಥಿಗಳ ಸಹಿ: ದಿನಾಂಕ:

Door No. 2444, MCC "A" Block, 11th Main, 11th Cross, Near Bakkeshwara High School, Davangere - 577 004. E-mail : giokarnataka@gmail.com Contact : 98448 09768